ಮಂತ್ರಿಯವರಿಂದ ಹೇಳಿಕೆ

ಮುಂಜಾನೆ ಪತ್ರಿಕೆಯ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.–ಅಧ್ಯಕ್ಷರೆ, ಮುಂಜಾನೆ ಪತ್ರಿಕೆಯ ಬಗ್ಗೆ ಮಾನ್ಯ ಮಂತ್ರಿಗಳು ಈ ದಿನ ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಶ್ರೀ ಡಿ. ಮಂಜುನಾಥ್ (ಮಾನ್ಯ ಕಾರ್ಮಿಕ ಸಚಿವರು).–ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ನನ್ನ ಹೇಳಿಕೆ ಈ ರೀತಿ ಇದೆ.

ಕರ್ನಾಟಕ ಜರ್ನಲ್ಸ್ ಮಂತ್ತು ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಈ ಸಂಸ್ಥೆಯವರು ತಮ್ಮ ಪ್ರಕಟಣೆಗಳಾದ ಮುಂಜಾನೆ ದಿನಪತ್ರಿಕೆ, ಪ್ರಜಾಪ್ರಭ ತ್ತ ವಾರಪತ್ರಿಕೆ, ಚಿತ್ರದೀಪ, ಪತ್ರಿಕೆಗಳ ಪ್ರಕಟಣೆ ೨೩–೩–೧೯೮೫ ರಿಂದ ಕಚ್ಚಾ ಮಾಲಿನ ಕೊರತೆ ಮಂತ್ತು ಯಾಂತ್ರಿಕ ತೊಂದರೆಗಳ ಕಾರಣ ನಿಲ್ಲಿಸಬೇಕಾಗಿದೆ ಎಂದು ಆ ಕಾರಣ ಒಟ್ಟು ೧೦೧ ಕೆಲಸಗಾರರು ೨೩–೩–೧೯೮೫ ರಿಂದ ಲೇ ಆಫ್ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಿಕಾಕರ್ತ ಸಂಘಗಳವರು ತಮ್ಮ ೨೫–೩–೧೯೮೫ರ ಮನವಿ ಪ್ರಕಾರ ಈ ಆಫ್‌ಗೆ ಅನುಮತಿ ಪಡೆದಿಲ್ಲವೆಂತಲ್ಲೂ ಸಂಬಂಧಪಟ್ಟ ಕಾರ್ಮಿಕ ಸಂಘಗಳಿಗೆ ಮುಂಚಿತವಾಗಿ ತಿಳುವಳಿಕೆ ಕೊಟ್ಟಿಲ್ಲವೆಂತಲೂ ಲೇ ಆಫ್‌ಗೆ ಕೊಟ್ಟಿರುವ ಕಾರಣ ಕೆಳು ನಿಜವಲ್ಲವೆಂತಲೂ ತಿಳಿಸಿ ಈ ಲೇ ಆಫ್ ಕಾನೂನು ಬಾಹಿರ ವೆಂತ್ತು ಆ ಕಾರಣ ಪತ್ರಿಕೋದ್ಯೋಗಿಗಳ ಮತ್ತು ಇದರ ನೌಕರರು ಪೂರ್ಣ ವೇತನ ಪಡೆಯಲು ಅರ್ಹರಾಗಿರುತ್ತಾರೆ ಎಂತಲೂ ತಿಳಿಸಿದ್ದಾರೆ ಈ ಬಗ್ಗೆ ೨೮–೩–೧೯೮೫ ರಂದು ಬೆಂಗಳೂರು ೧ ನೇ ವಿಭಾಗದ ಡೆಪ್ಯೂಟಿ ಲೇಬರ್ ಕಮಿಷನರ್‌ರವರು ಒಂದು ಸಭೆಯನ್ನು ಕರೆದಿದ್ದರು. ಆ ಸಭೆಗೆ ಆಡಳಿತ ವರ್ಗದವರು ಹಾಜರಾಗಿರಲಿಲ್ಲ. ಮುಂದಿನ ಸಭೆಯು ೧೫ನೇ ರಲ್ಲೇ ನಡೆಯಲಿದೆ. ಮಾತುಕತೆಗಳನ್ನು ಮುಂದುವರೆಸಿ ಸಮಸ್ಯೆ ಪರಿಹಾರಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿದ ಚರ್ಚೆ)

† **ಶ್ರೀ ಹೆಚ್. ಜಿ. ಚನ್ನಪ್ಪ** (ಮಾಗಡಿ).—ಮಾನ್ಯ ಅಧ್ಯಕ್ಷರೆ, ನಿನ್ನೆ ಅಪೂರ್ಣಗೊಳಿಸಿದ್ದ ನನ್ನ ಭಾಷಣವನ್ನು ಮುಂದುವರಿಸಿ ಕೆಲವು ವಿಚಾರಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕ ವಿಷಯದ ಬಗ್ಗೆ ಅತೀ ಮುಖ್ಯವಾದ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿ ನನ್ನ ಭಾಷಣವನ್ನು ಮುಗಿಸಿತ್ತೇನೆ. ರೈತರು ಬೆಳೆದಂತಹ ಬೆಳೆಗಳಿಗೆ ಒಳ್ಳೆಯ ಬೆಲೆಯನ್ನು ಕೊಡಿಸತಕ್ಕದ್ದರ ಬಗ್ಗೆ ಹೇಳಿದ್ದಾರೆ. ಇಲ್ಲಿಯವರೆಗೆ ರೈತರ ಬಗ್ಗೆ ಯಾವ ಸರ್ಕಾರ ಕೂಡ ಕಾಳಜಿಯನ್ನು ವಹಿಸಿರಲಿಲ್ಲ ರೈತ ದೇಶದ ಬೆನ್ನೆಲುಬು ಎಂದು ಎಲ್ಲರೂ ಹೇಳಿದರೇ ಹೊರತು ರೈತ ಬೆಳೆದಂತಹ ಬೆಳೆಗೆ ಏನು ಖರ್ಚು ಬಿದ್ದಿದೆ, ಅವನ ಆದಾಯ ಏನು ಎಂಬುದನ್ನು ಯಾರು ವಿಮರ್ಶೆ ಮಾಡಿರಲಿಲ್ಲ. ಅವನು ಬೆಳೆದಂತಹ ಮೂಲನ್ನು ಮಾರುಕಟ್ಟೆಗೆ ತಂದು ಮಾರತಕ್ಕದ್ದರ ಬಗ್ಗೆ ಯಾರೂ ಆಲೋಚನೆ ಮಾಡಿರಲಿಲ್ಲ. ಆ ಬಗ್ಗೆ ಜನತಾ ಸರ್ಕಾರದವರು ಆಲೋಚನೆ ಮಾಡಿರುವುದು ಶ್ಲಾಘನೀಯವಾದ ವಿಷಯವೆಂದರೆ ತಪ್ಪಾಗಲಾರದು. ಅದೇ ರೀತಿ ರೈತರ ಅಭಿವೃದ್ಧಿ ಯೋಜನೆಗಳ ಬಗ್ಗೆ ವಿಚಾರ ಮಾಡಿ ಸಾವಿರಾರು ಹೆಕ್ಟೇರ್ ಭೂಮಿಗೆ ನೀರಾವರಿ ಮಾಡಿಕೊಡಬೇಕೆಂಬ ಬಗ್ಗೆ ಯೋಜನೆ ಹಾಕಿಕೊಂಡಿದ್ದಾರೆ. ಅದು ಕಾರ್ಯಗತವಾದರೆ ಶೇಕಡ ೮೦ರಷ್ಟು ನೀರಾವರಿ ಆಗುತ್ತದೆಂಬ ಮಾತನ್ನು ಹೇಳಿದ್ದಾರೆ ವ್ಯವಸಾಯವೇ ಆಧಾರವಾಗಿರತಕ್ಕ ನಮ್ಮ ದೇಶದಲ್ಲಿ ಮಂಳೆಗಾಲ ಗ್ಯಾಂಬ್ಲಿಂಗ್ ಇದ್ದ ಹಾಗೆ. ಮಳೆಗಾಲದಲ್ಲಿ ಬಹಳ ವ್ಯತ್ಯಾಸವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಶೇಕಡ ೮೦ ಭಾಗ ಪ್ರದೇಶಗಳಿಗೆ ನೀರು ಒದಗಿಸಂಪ ಯೋಜನೆ ಸಾಮಾನ್ಯವಾದುದಲ್ಲ. ಈ ಯೋಜನೆ ಕಾರ್ಯಗತವಾಗುವುದಾದರೆ ಅದು ಸ್ತುತ್ಯಾರ್ಹ ಮತ್ತು ಸ್ವಾಗತಾರ್ಹವಾದುದು. ಇದರಿಂದ ರೈತನ ಸ್ಥಿತಿ ನಿಜವಾಗಿಯೂ ಸುಧಾರಣೆ ಆಗುತ್ತದೆ. ಆತ ಗರಿಷ್ಠ ಪಟ್ಟದಿಂದ ಮೇಲಕ್ಕೆ ಬರುತ್ತಾನೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.